**ಸಿಸಿ ನಂ. 1444/2024**

**ಸಿ.ಡಬ್ಲೂ–1 ಪಿ.ಡ್ಲೂ:1**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.**

| | | |
|---|---|---|
| ಸಾಕ್ಷಿದಾರನ ಹೆಸರು | : | ನಾಗೇಶ ಡೋರನಳ್ಳೀ |
| ತಂದೆ ಹೆಸರು | : | ವಿಠ್ಠಲ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಸಿಂದಗಿ |

ದಿನಾಂಕ 01–09–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

1. ಚಾ.ಸಾ. 5 ನನ್ನ ಅಣ್ಣ. ಚಾಸಾ 6 ನನ್ನ ತಾಯಿ. ಚಾ.ಸಾ. 7 ರಿಂದ 13 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಮೃತ ವಿಠ್ಠಲ ನನ್ನ ತಂದೆ. ಅವರು ಅಪಘಾತದಲ್ಲಿ ಮರಣ ಹೊಂದಿದ್ದಾರೆ. ಸುಮಾರು 02 ವರ್ಷಗಳ ಹಿಂದೆ ಸಂಭವಿಸಿದೆ. ಎಲ್ಲಿ ಸಂಭವಿಸಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರನ್ನು ಸಿಂದಗಿಯ ಜಾಲಗೇರಿಯ ಆಸ್ಪತ್ರೆಯಲ್ಲಿ ಬಂದು ನೋಡಿರುತ್ತೇನೆ. ಅವರಿಗೆ ಆಗಿರುವ ಗಾಯಗಳನ್ನು ನಾನು ನೋಡಿಲ್ಲ. ನಮ್ಮ ಸಂಬಂಧಿಕರು ನನ್ನ ತಂದೆಯವನ್ನು ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರಕ್ಕೆ ಕರೆದುಕೊಂಡು ಹೋಗಿದ್ದರು. ನಾನು ಮನೆಗೆ ಮರಳಿ ಬಂದಿರುತ್ತೇನೆ. ವಿಜಯಪುರ ಆಸ್ಪತ್ರೆಗೆ ಹೋಗುವಷ್ಟರಲ್ಲಿ ನನ್ನ ತಂದೆ ಮರಣ ಹೊಂದಿದ್ದರು.

2. ಅಪಘಾತವು ಯಾರ ತಪ್ಪಿನಿಂದ ಸಂಭವಿಸಿದೆ ಎಂದು ನಾನು ಕೇಳಿಲ್ಲ. ನಮ್ಮ ಊರಿನವರ ಮಾತು ಕೇಳಿ ದೂರನ್ನು ನೀಡಿರುತ್ತೇನೆ. ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಯಿತು. ದೂರಿನಲ್ಲಿ ಏನೆಲ್ಲ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಆ ದಿನ ಯಾರು ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸರಕಾರಿ ಸಹಾಯಕರು ಅಭೀಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸರಕಾರಿ ಸಹಾಯಕ ಅಭೀಯೋಜಕ ರವರಿಂದ.**

3. ದಿ.13–08–2023 ರಂದು ಮದ್ಯಾಹ್ಣ 3–00 ಗಂಟೆ ಸುಮಾರಿಗೆ ಈ ದಿನ ನ್ಯಾಯಾಲಯಮುಂದೆ ಆರೋಪಿಯ ತನ್ನ ಟಂಟಂ ವಾಹನ ನಂ. ಕೆಎ 28/ಡಿ–7521 ನ್ನು ವಿಠ್ಠಲ ರವರನ್ನು ಕುಡಿಸಿಕೊಂಡು ತನ್ನ ಟಂಟಂ ನ್ನು ಅತೀ ಜೊರಾಗಿ ಮತ್ತು ನಿರ್ಲಕ್ಷತನದಿಂದ ಸಿಂದಗಿ ಕಡೆಯಿಂದ ಖೈನೂರ ಕಡೆಗೆ ಚಾಲನೆ ಮಾಡಿಕೊಂಡು ಹೊಗುತಿದ್ದಾಗ ಯಂಕಂಚಿ ಹಳ್ಳದ ಸಮೀಪ್ ರಸ್ತೆಯ ಬದಿ ಯಲ್ಲಿ ಪ್ಲಟಿ ಮಾಡಿ ಆತನ ತಲೆಗೆ ಮತ್ತು ಬೆನ್ನಿಗೆ ಭಾರಿ ಗಾಯಗಳು ಆಗುವಂತೆ ಮಾಡಿ ಟಂ ಟಂನದಲ್ಲಿದ್ದ ಚಾಸಾ 13 ರವರಿಗೂ ಸಹ ಮೈ ಕೈ ಮತ್ತು ತಲೆಗೆ ಗಾಯಗಳು ಆಗುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಸಿಸಿ ನಂ. 1444/2024**

**ಸಿ.ಡಬ್ಲೂ–1 ಪಿ.ಡ್ಲೂ:1**

4. ಆರೋಪಿಯು ತನ್ನ ವಾಹನವನ್ನು ಜೋರಾಗಿಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿದ್ದರಿಂದ ಅಪಘಾತ ಸಂಬವಿಸಿದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯವನ್ನು ತಿಳಿದುಕೊಂಡು ದೂರಿನಲ್ಲಿ ಬರೆದು ದೂರಿನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ.</u>**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.

ಸಿಂದಗಿ